**Akashvani : Bangalore**
**National Bulletin In Kannada**
**15.07.2024 / 13.10 hrs**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**15.07.2024 13.10 hrs**

**<><*<><>*><>**

**ಮುಖ್ಯಾಂಶಗಳು**

೧. ಕರ್ನಾಟಕ ವಿಧಾನಮಂಡಲ ಅಧಿವೇಶನ ಆರಂಭ: ಇತ್ತೀಚಿಗೆ ಅಗಲಿದ ಗಣ್ಯರಿಗೆ ಉಭಯ ಸದನಗಳಲ್ಲಿ ಸಂತಾಪ

೨. ೨೦೩೦ರ ವೇಳೆಗೆ ಭಾರತದ ಚಿಲ್ಲರೆ ಡಿಜಿಟಲ್ ಪಾವತಿ ೭ ಟ್ರಿಲಿಯನ್ ಡಾಲರ್ ಗಳಿಗೆ ದ್ವಿಗುಣಗೊಳ್ಳುವ ನಿರೀಕ್ಷೆ

೩. ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಇಂದು ಭಾರಿ ಮಳೆಯಾಗುವ ಸಾಧ್ಯತೆ

೪. ವಿಂಬಲ್ಡನ್ ಓಪನ್ - ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸತತ ೨ನೇ ಬಾರಿ ಚಾಂಪಿಯನ್ ಪಟ್ಟಕ್ಕೇರಿದ ಕಾರ್ಲೋಸ್ ಅಲ್ಕರಾಜ್

**<><*<><>*><>**

ಕರ್ನಾಟಕ ವಿಧಾನಮಂಡಲ ಅಧಿವೇಶನ ಇಂದು ಆರಂಭಗೊಂಡಿತು. ಅಧಿವೇಶನದ ಮೊದಲ ದಿನದ ಕಲಾಪ ಆರಂಭವಾಗುತ್ತಿದ್ದಂತೆ ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ, ಸಭಾ ನಾಯಕರಾಗಿ ಭೋಸರಾಜ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಿಸಿದರು. ಬಳಿಕ ಅಗಲಿದ ಗಣ್ಯರಿಗೆ ಗೌರವ ಸೂಚಿಸುವ ಸಂತಾಪ ನಿರ್ಣಯವನ್ನು ಮಂಡಿಸಿದರು. ಮಾಜಿ ವಿಧಾನಪರಿಷತ್ ಸದಸ್ಯರಾದ ಸುನಂದಾ ಪಾಟೀಲ, ಟಿ.ಕೆ.ಚಿನ್ನಸ್ವಾಮಿ, ಇಕ್ಬಾಲ್ ಅಹಮದ್ ಸರಡಗಿ, ಎಂಬಿ ಭಾನು ಪ್ರಕಾಶ, ಮಾಜಿ ಸಚಿವರಾದ ನಾಗಮ್ಮ ಕೇಶವಮೂರ್ತಿ, ಕೇಂದ್ರದ ಮಾಜಿ ಸಚಿವ ಶ್ರೀನಿವಾಸಪ್ರಸಾದ್, ಎಂ.ಪಿ.ಕೇಶವಮೂರ್ತಿ, ಪಾಡ್ದನ ಕಲಾವಿದೆ ಗಿಡಿಗೆರೆ ರಾಮಕ್ಕ, ನಟ ದ್ವಾರಕೀಶ್, ಯಕ್ಷಗಾನ ಕಲಾವಿದ ಸುಬ್ರಹ್ಮಣ್ಯ ಧಾರೆಶ್ವರ, ಪೇತ್ರಿ ಮಾಧವನಾಯಕ್, ಸರೋದ್ ವಾದಕ ರಾಜೀವ್ ತಾರಾನಾಥ, ಹಿರಿಯ ರಂಗಕರ್ಮಿ ಡಾ.ನಟೇಶ್ ರತ್ನ, ಕನ್ನಡ ವಿದ್ವಾಂಸರಾದ ಕಮಲಾ ಹಂಪನಾ ಹಾಗೂ ನಿರೂಪಕಿ ಅಪರ್ಣಾ ಅವರಿಗೆ ಸದನವು ಸಂತಾಪ ಸೂಚಿಸಿತು. ಸಂತಾಪ ನಿರ್ಣಯದ ಮೇಲೆ ಮಾತನಾಡಿದ ಸಭಾಪತಿ ಹೊರಟ್ಟಿ ಅವರು, ಅಗಲಿದ ಗಣ್ಯರ ಸೇವೆಯನ್ನು ಸ್ಮರಿಸಿದರು. ಕೇಂದ್ರ ಮಾಜಿ ಸಚಿವರಾಗಿದ್ದ ವಿ.ಶ್ರೀನಿವಾಸ್ ಪ್ರಸಾದ್ ಅವರು, ದಲಿತ ಸಮುದಾಯದ ಆಶಾಕಿರಣವಾಗಿದ್ದರು. ಯಾವುದೇ ಹುದ್ದೆಯನ್ನು ನೀಡಿದರೂ ಅದನ್ನು ಯಶಸ್ವಿಯಾಗಿ ನಿಭಾಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ರಾಜ್ಯವು ಅವರನ್ನು ಕಳೆದುಕೊಂಡು ಬಡವಾಗಿದೆ ಎಂದು ವಿಷಾದಿಸಿದರು.

**<><*<><>*><>**

೨೦೩೦ರ ವೇಳೆಗೆ ಭಾರತದ ಚಿಲ್ಲರೆ ಡಿಜಿಟಲ್ ಪಾವತಿ ೭ ಟ್ರಿಲಿಯನ್ ಡಾಲರ್‌ಗಳಿಗೆ ದ್ವಿಗುಣಗೊಳ್ಳುವ ಸಾಧ್ಯತೆಯಿದೆ ಎಂದು ಕೆರ್ನಿ ಮತ್ತು ಅಮೆಜಾನ್ ಪೇ ಜಂಟಿ ಅಧ್ಯಯನ ತಿಳಿಸಿದೆ. ಚಿಲ್ಲರೆ ವ್ಯಾಪಾರಕ್ಕಾಗಿ ಭಾರತದ ಡಿಜಿಟಲ್ ಪಾವತಿಗಳು ೨೦೧೭-೧೮ರ ಆರ್ಥಿಕ ವರ್ಷದಲ್ಲಿ ೩೦೦ ಬಿಲಿಯನ್ ಡಾಲರ್ಗಳಿಗೆ ಹೋಲಿಸಿದರೆ ೨೦೨೩-೨೪ರ ಆರ್ಥಿಕ ವರ್ಷದಲ್ಲಿ ೩.೬ ಟ್ರಿಲಿಯನ್ ಡಾಲರ್ ಗಳಿಗೆ ಏರಿದೆ ಎಂದು 'ಹೌ ಅರ್ಬನ್ ಇಂಡಿಯಾ ಪೇಸ್' ಎಂಬ ಅಧ್ಯಯನ ತಿಳಿಸಿದೆ. ಯುಪಿಐ ವಹಿವಾಟುಗಳನ್ನು ಭಾರತದಲ್ಲಿ ೨೦೧೬ರ ಏಪ್ರಿಲ್ ೧೧ರಂದು ಪರಿಚಯಿಸಲಾಯಿತು. ೨೦೧೮ ರಿಂದ ೨೦೨೪ ರ ಹಣಕಾಸು ವರ್ಷದಿಂದ ಯುನಿಫೈಡ್ ಪೇಮೆಂಟ್ ಇಂಟರ್ ಪೇಸ್ - ಯುಪಿಐ ಪಾವತಿ ಮಟ್ಟದಲ್ಲಿ ಡಿಜಿಟಲ್ ವಹಿವಾಟಿನ ಮಟ್ಟವು ಶೇಕಡಾ ೧೩೮ ರಷ್ಟು ಬೆಳವಣಿಗೆಯನ್ನು ಕಂಡಿದೆ. ಭಾರತದ ಇ-ಕಾಮರ್ಸ್ ಮಾರುಕಟ್ಟೆ ೨೦೨೨ ರಲ್ಲಿ ೭೫ ಬಿಲಿಯನ್ ಡಾಲರ್ ಗಳಿಂದ ೮೦ ಬಿಲಿಯನ್ ಡಾಲರ್‌ಗಳ ಮೌಲ್ಯದ್ದಾಗಿದೆ, ಇದು ೨೦೩೦ ರ ವೇಳೆಗೆ ಶೇಕಡಾ ೨೧ ರಷ್ಟು ಬೆಳೆಯುವ ನಿರೀಕ್ಷೆಯಿದೆ ಎಂದು ವರದಿ ಹೇಳಿದೆ. ಭಾರತದಲ್ಲಿ, ಕಾರ್ಡ್ ಗಳು ಮತ್ತು ಡಿಜಿಟಲ್ ವ್ಯಾಲೆಟ್ ವಹಿವಾಟುಗಳು ಒಟ್ಟಾರೆ ಡಿಜಿಟಲ್ ವಹಿವಾಟಿನ ಮೌಲ್ಯದ ಶೇಕಡಾ ೧೦ ರಷ್ಟಿದೆ. ೨೦೨೨ ರಲ್ಲಿ ಭಾರತದ ಡಿಜಿಟಲ್ ವಹಿವಾಟುಗಳು ಇಡೀ ವಿಶ್ವದ ಡಿಜಿಟಲ್ ಪಾವತಿ ಪ್ರಮಾಣಗಳಲ್ಲಿ ಶೇಕಡಾ ೪೬ ರಷ್ಟಿತ್ತು ಎಂದು ವರದಿ ತಿಳಿಸಿದೆ.

<><*<><>*><>

ನೇಪಾಳದ ನೂತನ ಪ್ರಧಾನ ಮಂತ್ರಿಯಾಗಿ ಆಯ್ಕೆಯಾಗಿರುವ ಕೆ.ಪಿ.ಶರ್ಮಾ ಓಲಿ ಅವರನ್ನು, ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಭಾರತ ಮತ್ತು ನೇಪಾಳ ನಡುವಿನ ಸ್ನೇಹವನ್ನು ಮತ್ತಷ್ಟು ಬಲಪಡಿಸಲು ಮತ್ತು ಪರಸ್ಪರ ಲಾಭದಾಯಕ ದ್ವಿಪಕ್ಷೀಯ ಸಹಕಾರವನ್ನು ಇನ್ನಷ್ಟು ವಿಸ್ತರಿಸಲು ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿರುವುದಾಗಿ ಅವರು ತಮ್ಮ ಸಂದೇಶದಲ್ಲಿ ಹೇಳಿದ್ದಾರೆ.

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸಾಮಾಜಿಕ ಮಾಧ್ಯಮ ಖಾತೆ ಎಕ್ಸ್ ನಲ್ಲಿ ೧೦ ಕೋಟಿ ಹಿಂಬಾಲಕರನ್ನು ಮೀರುವ ಮೂಲಕ ಮಹತ್ವದ ಮೈಲಿಗಲ್ಲನ್ನು ಸಾಧಿಸಿದ್ದಾರೆ. ನರೇಂದ್ರ ಮೋದಿ ಈಗ ಎಕ್ಸ್ ನಲ್ಲಿ ವಿಶ್ವದ ಅತಿ ಹೆಚ್ಚು ಫಾಲೋವರ್ಸ್ ಹೊಂದಿರುವ ನಾಯಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅಮೆರಿಕ ಅಧ್ಯಕ್ಷ ಜೋ ಬೈಡನ್ ೩೮.೧ ಮಿಲಿಯನ್ ಮತ್ತು ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೋ ೬.೫ ಮಿಲಿಯನ್ ಸೇರಿದಂತೆ ಇತರ ವಿಶ್ವ ನಾಯಕರಿಗಿಂತ ಪ್ರಧಾನಿ ನರೇಂದ್ರ ಮೋದಿ ಬಹಳ ಮುಂದಿದ್ದಾರೆ.

<><*<><>*><>

ಭಾರತ ಮತ್ತು ಮಾರ್ಷಲ್ ದ್ವೀಪಗಳು ಸ್ನೇಹಪರ ದ್ವಿಪಕ್ಷೀಯ ಸಂಬಂಧಗಳ ಸುದೀರ್ಘ ಇತಿಹಾಸವನ್ನು ಹಂಚಿಕೊಂಡಿವೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಮಾರ್ಷಲ್ ದ್ವೀಪಗಳಲ್ಲಿ ನಾಲ್ಕು ಸಮುದಾಯ ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕಾಗಿ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಿದ ಸಂದರ್ಭದಲ್ಲಿ ಮಾತನಾಡಿದ ಡಾ.ಜೈಶಂಕರ್, ಪೆಸಿಫಿಕ್ ನಲ್ಲಿರುವ ದ್ವೀಪಗಳು ಸಣ್ಣ ದ್ವೀಪಗಳಲ್ಲ ಆದರೆ ದೊಡ್ಡ ಸಾಗರ ದೇಶಗಳಾಗಿವೆ ಎಂದು ಹೇಳಿದರು. ಸುಸ್ಥಿರ

ಅಭಿವೃದ್ಧಿಯ ಅನ್ವೇಷಣೆಯಲ್ಲಿ ಪೆಸಿಫಿಕ್ ದ್ವೀಪಗಳನ್ನು ಬೆಂಬಲಿಸುವುದು ಜವಾಬ್ದಾರಿ ಎಂದು ಭಾರತ ಪರಿಗಣಿಸುತ್ತದೆ ಎಂದು ಅವರು ಹೇಳಿದರು. ಹವಾಮಾನ ಬದಲಾವಣೆ, ನೈಸರ್ಗಿಕ ವಿಪತ್ತುಗಳು, ಬಡತನ ನಿರ್ಮೂಲನೆ ಮತ್ತು ಆರೋಗ್ಯ ರಕ್ಷಣೆ ಭಾರತ ಮತ್ತು ಮಾರ್ಷಲ್ ದ್ವೀಪಗಳು ಒಟ್ಟಾಗಿ ಎದುರಿಸಬೇಕಾದ ಸಾಮಾನ್ಯ ಸವಾಲುಗಳಾಗಿವೆ ಎಂದು ಅವರು ಹೇಳಿದರು.

<><*<><>*><>

ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ -ಸಿಯುಇಟಿ - ಯುಜಿ ಬಾಧಿತ ಅಭ್ಯರ್ಥಿಗಳಿಗೆ ಮರು ಪರೀಕ್ಷೆ ನಡೆಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ-ಎನ್‌ಟಿಎ ಪ್ರಕಟಿಸಿದೆ. ಜುಲೈ ೧೯ ರಂದು ಸಿಬಿಟಿ - ಕಂಪ್ಯೂಟರ್ ಆಧಾರಿತ ಪರೀಕ್ಷೆ ಮೋಡ್ ನಲ್ಲಿ ಪರೀಕ್ಷೆ ನಡೆಯಲಿದೆ. ಎಲ್ಲಾ ಬಾಧಿತ ಅಭ್ಯರ್ಥಿಗಳಿಗೆ ಅವರ ವಿಷಯ ಕೋಡ್ ಗಳನ್ನು ಉಲ್ಲೇಖಿಸಿ ಇ-ಮೇಲ್ ಮೂಲಕ ಮಾಹಿತಿಯನ್ನು ಕಳುಹಿಸಲಾಗಿದೆ. ಎಲ್ಲಾ ಬಾಧಿತ ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಶೀಘ್ರದಲ್ಲೇ ನೀಡಲಾಗುವುದು. ವಿಷಯ ತಜ್ಞರ ಪ್ರತಿಕ್ರಿಯೆಯ ಆಧಾರದ ಮೇಲೆ ಅಂತಿಮ ಕೀ ಉತ್ತರಗಳನ್ನು ಸಿದ್ಧಪಡಿಸಲಾಗುತ್ತಿದೆ, ಆನ್ ಲೈನ್ ನಲ್ಲಿ ಸ್ವೀಕರಿಸಿದ ಸವಾಲುಗಳನ್ನು ಗಣನೆಗೆ ತೆಗೆದುಕೊಂಡು ಶೀಘ್ರದಲ್ಲೇ ಅಧಿಕೃತ ವೆಬ್ ಸೈಟ್ ನಲ್ಲಿ ಅಪ್ಲೋಡ್ ಮಾಡಲಾಗುವುದು ಎಂದು ಎನ್ ಟಿಎ ತಿಳಿಸಿದೆ. ಭಾರತದ ಹೊರಗಿನ ೨೬ ನಗರಗಳು ಸೇರಿದಂತೆ ೩೭೯ ನಗರಗಳಲ್ಲಿರುವ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಮೇ ತಿಂಗಳಲ್ಲಿ ಪ್ರವೇಶ ಪರೀಕ್ಷೆ ನಡೆಸಲಾಗಿತ್ತು. ಈ ಬಾರಿ ಆನ್ ಲೈನ್ ಹಾಗೂ ಭೌತಿಕ ಎರಡರಲ್ಲೂ ಪರೀಕ್ಷೆ ನಡೆಸಲಾಗಿತ್ತು.

<><*<><>*><>

ವಿಕ್ರಮ್ ಮಿಸ್ರಿ ಅವರು ಇಂದು ವಿದೇಶಾಂಗ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ವಿಕ್ರಮ್ ಅವರು ವಿನಯ್ ಮೋಹನ್ ಕ್ವಾತ್ರಾ ಅವರ ಸ್ಥಾನವನ್ನು ತುಂಬಲಿದ್ದಾರೆ. ವಿನಯ್ ಕ್ವಾತ್ರಾ ಅವರ ಅಧಿಕಾರಾವಧಿ ನಿನ್ನೆ ಕೊನೆಗೊಂಡಿದೆ. ಮಿಸ್ರಿ ಅವರು ೧೯೮೯ರ ಬ್ಯಾಚ್ ನ ಐಎಫ್ ಎಸ್ ಅಧಿಕಾರಿಯಾಗಿದ್ದಾರೆ. ಅವರು ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯದಲ್ಲಿ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿದ್ದರು.

<><*<><>*><>

ಆಕಾಶವಾಣಿಯ ಪಬ್ಲಿಕ್‌ಸ್ಪೀಕ್ ಕಾರ್ಯಕ್ರಮದಡಿ, ಅಧಿಕ ರಕ್ತದೊತ್ತಡದ ನಿರ್ವಹಣೆ, ಪರಿಣಾಮಕಾರಿ ಕ್ರಮ ಮತ್ತು ಪರಿಹಾರ ಕುರಿತ ಚರ್ಚೆ ಇಂದು ರಾತ್ರಿ ೯.೩೦ಕ್ಕೆ ಪ್ರಸಾರವಾಗಲಿದೆ. ದೆಹಲಿ ಏಮ್ಸ್‌ನ ಹೃದಯತಜ್ಞ ಪ್ರೊಫೆಸರ್ ಡಾ. ರಾಕೇಶ್ ಯಾದವ್, ಆಹಾರ ತಜ್ಞೆ ಡಾ. ರಿಚಾ ಜೈಸ್ವಾಲ್ ಕೇಳುಗರ ಪ್ರಶ್ನೆಗೆ ಉತ್ತರ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಕೇಳುಗರು, ರಕ್ತದೊತ್ತಡದ ರೋಗಲಕ್ಷಣಗಳು, ತಡೆಗಟ್ಟುವಿಕೆ ಮತ್ತು ಆರೋಗ್ಯಕರ ಜೀವನಶೈಲಿಯಂತಹ ವಿವಿಧ ಅಂಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲು ಅವಕಾಶವಿದೆ. ಭಾಗವಹಿಸಲು, ಇಂದು ರಾತ್ರಿ ೯:೩೦ ರಿಂದ ೦೧೧ - ೨೩೪೨೧೦೫೦ ಮತ್ತು ೦೧೧ - ೨೩೩೧೪೪೪೪ ದೂರವಾಣಿ ಸಂಖ್ಯೆಗಳನ್ನು ಡಯಲ್ ಮಾಡಿ. ಪರ್ಯಾಯವಾಗಿ, ಪ್ರಶ್ನೆಗಳನ್ನು ವಾಟ್ಸಾಪ್ ಮೂಲಕ ೯೨೮೯೧೪೦೪೪ ಸಂಖ್ಯೆಗೆ ಕಳುಹಿಸಬಹುದು ಅಥವಾ ನಿಮ್ಮ ಪ್ರಶ್ನೆಗಳನ್ನು ಆಸ್ಕ್ ಏರ್ ಹ್ಯಾಶ್ ಟ್ಯಾಗ್ ನೊಂದಿಗೆ ಎಕ್ಸ್ ನಲ್ಲಿ ಹಂಚಿಕೊಳ್ಳಬಹುದಾಗಿದೆ.

<><*<><>*><>

ಭಾರತೀಯ ಹವಾಮಾನ ಇಲಾಖೆ ಇಂದು ಉತ್ತರಾಖಂಡ, ಪೂರ್ವ ಉತ್ತರ ಪ್ರದೇಶ ಮತ್ತು ಪೂರ್ವ ರಾಜಸ್ಥಾನದ ಪ್ರತ್ಯೇಕ ಸ್ಥಳಗಳಲ್ಲಿ ಭಾರೀ ಮಳೆಯ ಮುನ್ಸೂಚನೆ ನೀಡಿದೆ. ಉತ್ತರಾಖಂಡ, ಉತ್ತರ ಪ್ರದೇಶ ಮತ್ತು ರಾಜಸ್ಥಾನದಲ್ಲಿ ಪ್ರತ್ಯೇಕ ಸ್ಥಳಗಳಲ್ಲಿ ಗುಡುಗು ಮತ್ತು ಸಿಡಿಲು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಹರಿಯಾಣ, ಉತ್ತರ ಪ್ರದೇಶ ಮತ್ತು ದೆಹಲಿಯ ಕೆಲವು ಪ್ರದೇಶಗಳಲ್ಲಿ ಗುಡುಗು ಮತ್ತು ಮಿಂಚು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

<><*<><>*><>

ವಿಶ್ವ ವಿಖ್ಯಾತ ಪುಣ್ಯ ಕ್ಷೇತ್ರ ಪುರಿಯಲ್ಲಿ ಇಂದು ಬಹುದಾ ಯಾತ್ರಾ ನಡೆಯಲಿದೆ. ಭಗವಾನ್ ಜಗನ್ನಾಥ, ಭಗವಾನ್ ಬಲಭದ್ರ, ದೇವಿ ಸುಭದ್ರಾ ಮತ್ತು ಭಗವಾನ್ ಸುದರ್ಶನ ದೇವರುಗಳು, ಗುಂಡಿಚಾ ದೇವಿ ಮಂದಿರಕ್ಕೆ ೮ ದಿನಗಳ ಭೇಟಿ ನಂತರ ತಮ್ಮ ನಿಯಮಿತ ನೆಲೆಗೆ ಹಿಂತಿರುಗುತ್ತಿರುವ ಉತ್ಸವ ಇದಾಗಿದೆ. ಎಂಟು ದಿನಗಳ ಹಿಂದೆ ಕಳೆದ ಶುಕ್ರವಾರ, ದಕ್ಷಿಣ ಮೋಡಾದಿಂದ ಆರಂಭವಾದ ಯಾತ್ರೆಯ ರಥಗಳನ್ನು ಗುಂಡಿಚಾ ದೇವಸ್ಥಾನದ ನಾಕಚನ ದ್ವಾರದ ಎದುರು ನಿಲ್ಲಿಸಲಾಗಿತ್ತು.

<><*<><>*><>

ದೇಶೀಯ ಷೇರು ಸಂವೇದಿ ಸೂಚ್ಯಂಕಗಳು ಇಂದಿನ ಆರಂಭಿಕ ವಹಿವಾಟಿನಲ್ಲಿ ಏರಿಕೆ ಕಂಡಿವೆ. ನಿಫ್ಟಿ ತನ್ನ ಹೊಸ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದೆ. ಐಟಿ ಷೇರುಗಳ ಖರೀದಿ, ಹೊಸ ವಿದೇಶಿ ನಿಧಿಯ ಒಳಹರಿವು ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿನ ಏರಿಕೆಯಿಂದಾಗಿ ಮುಂಬೈ ಷೇರು ಸಂವೇದಿ ಸೂಚ್ಯಂಕ -ಸೆನ್ಸೆಕ್ಸ್ ಆರಂಭಿಕ ವಹಿವಾಟಿನಲ್ಲಿ ೨೯೦ ಅಂಕಗಳ ಏರಿಕೆ ಕಂಡು ೮೦ ಸಾವಿರದ ೮೧೧೦ ಕ್ಕೆ ತಲುಪಿದೆ. ರಾಷ್ಟ್ರೀಯ ಸಂವೇದಿ ಸೂಚ್ಯಂಕ- ನಿಫ್ಟಿ ೯೬ ಅಂಕಗಳು ಏರಿಕೆಗೊಂಡು ೨೪ ಸಾವಿರದ ೫೯೮ ಕ್ಕೆ ತಲುಪಿದೆ.

<><*<><>*><>

ಮಾಜಿ ನಂ.೧ ಆಟಗಾರ ನೊವಾಕ್ ಜೊಕೊವಿಚ್ ಅವರನ್ನು ೬-೨, ೬-೨, ೭-೬ ಸೆಟ್ ಗಳಿಂದ ಮಣಿಸಿದ ಸ್ಪೇನ್ ನ ಕಾರ್ಲೊಸ್ ಅಲ್ಕರಾಜ್ ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಕಳೆದ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ಮೊದಲೆರಡು ಸೆಟ್ ಗಳಲ್ಲಿ ೩ನೇ ಶ್ರೇಯಾಂಕಿತ ಅಲ್ಕರಾಜ್ ಮೇಲುಗೈ ಸಾಧಿಸಿದರು. ಆದರೆ ತೃತೀಯ ಸೆಟ್ ನಲ್ಲಿ ಜೊಕೊವಿಕ್ ಅವರಿಂದ ತೀವ್ರ ಪ್ರತಿರೋಧ ಎದುರಿಸಿದರು. ಆದಾಗ್ಯೂ ಟೈಬ್ರೇಕರ್ ನಲ್ಲಿ ಸೆಟ್ ಗೆದ್ದು ಸತತ ಎರಡನೇ ಬಾರಿ ವಿಂಬಲ್ಡನ್ ಕಿರೀಟವನ್ನು ತಮ್ಮದಾಗಿಸಿಕೊಂಡಿದ್ದಾರೆ.

<><*<><>*><>

ಬರ್ಲಿನ್ ನಲ್ಲಿ ಕಳೆದ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ೨-೧ ಗೋಲ್ ಗಳ ಅಂತರದಿಂದ ಸೋಲಿಸಿದ ಸ್ಪೇನ್ ತಂಡ ಯುರೋಪಿಯನ್ ಫುಟ್ಬಾಲ್ ಚಾಂಪಿಯನ್ ಷಿಪ್ ನಲ್ಲಿ ದಾಖಲೆಯ ನಾಲ್ಕನೇ ಬಾರಿ ಪ್ರಶಸ್ತಿ ಗೆದ್ದು ಸಾಧನೆ ಮಾಡಿದೆ.

<><*<><>*><>

ಮಿಯಾಮಿ ಹಾರ್ಡ್ ರಾಕ್ ಸ್ಟೇಡಿಯಂನಲ್ಲಿ ಇಂದು ನಡೆದ ಕೊಪಾ ಅಮೆರಿಕ ಫುಟ್ಬಾಲ್ ಚಾಂಪಿಯನ್ ಷಿಪ್ ನ ಫೈನಲ್ ಪಂದ್ಯದಲ್ಲಿ ಅರ್ಜೆಂಟೀನಾ ತಂಡ ೧-೦ ಗೋಲಿನಿಂದ ಕೊಲಂಬಿಯಾ ತಂಡವನ್ನು ಸೋಲಿಸಿ ಸತತ ಎರಡನೇ ಬಾರಿ ಪ್ರಶಸ್ತಿ ಗೆದ್ದುಕೊಂಡಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ೨.೩೦ ಕ್ಕೆ <>*><>